## ಖುಷಿಯ ಗುಟ್ಟು

ನೆರೆಮನೆಯಾತ ಪರಮೇಶಿಗೆ, 'ಇದೇನಯ್ಯಾ... ದಿನವೂ ನಿನ್ನ ಮನೆಯಿಂದ ಇಬ್ಬರೂ ಅಷ್ಟು ಜೋರಾಗಿ ನಗುವ ಶಬ್ದ ಕೇಳಿ ಬರುತ್ತದೆ? ನಿಮ್ಮ ಈ ಖುಷಿ ಜೀವನದ ಗುಟ್ಟು ನನಗೂ ಸ್ವಲ್ಪ ಹೇಳಿ ಕೊಡು' ಎಂದು ಕೇಳಿದ. ಅದಕ್ಕೆ ಪರಮೇಶಿ, 'ಹೋ... ಅದಾ? ನಿತ್ಯ ಒಂದಲ್ಲಾ ಒಂದು ವಿಷಯಕ್ಕೆ ಅವಳು ಜಗಳ ತೆಗೆಯುತ್ತಾಳೆ. ಕೋಪ ಬಂದಾಗ ಕೈಗೆ ಸಿಕ್ಕ ಪಾತ್ರೆಯನ್ನು ನನ್ನತ್ತ ಎಸೆಯುತ್ತಾಳೆ. ಆ ರೀತಿ ಎಸೆದ ಪಾತ್ರೆ ನನಗೆ ತಾಗಿದರೆ ಅವಳು ಜೋರಾಗಿ ನಗುತ್ತಾಳೆ. ಒಂದು ವೇಳೆ ಅದು ನನಗೆ ತಾಗದಿದ್ದರೆ ನಾನೂ ಅಷ್ಟೇ ಜೋರಾಗಿ ನಗುತ್ತೇನೆ. ಇದೇ ಕಣಯ್ಯ ನಮ್ಮ ಖುಷಿ ಜೀವನದ ಗುಟ್ಟು' ಎಂದ.

**ಅರವಿಂದ ಜಿ. ಜೋಷಿ**





## ತುಂಬಾ ಹಸಿದವ

ರಮೇಶ–ಯೋಗೇಶ ಆಪ್ತ ಸ್ನೇಹಿತರು, ಒಮ್ಮೆ ಪಾರ್ಕಿನಲ್ಲಿ ಕುಳಿತಿದ್ದಾಗ ಅವರಿಗೆ ಹಸಿವಾಗಿ ಏನಾದರೂ ತಿನ್ನಬೇಕೆಂದು ಅನಿಸಿತು. ಕಡ್ಲೆಕಾಯಿ ಮಾರುವವನಿಂದ ಒಂದು ಕಿಲೋ ಕಡಲೆಕಾಯಿ ಖರೀದಿಸಿ ತಿನ್ನಲು ಪ್ರಾರಂಭಿಸಿದರು. ರಮೇಶ ತಾನು ತಿಂದ ಕಡಲೆಕಾಯಿ ಸಿಪ್ಪೆಯನ್ನೆಲ್ಲಾ ಯೋಗೇಶನ ಮುಂದೆ ಹಾಕತೊಡಗಿದ. ಎಲ್ಲಾ ತಿಂದು ಮುಗಿಸಿದ ನಂತರ ಅವನು, 'ನೀನು ತುಂಬಾ ಹಸಿದಿದ್ದೆ ಅನ್ಸುತ್ತೆ, ಅದ್ಕೆ ಎಷ್ಟೊಂದು ತಿಂದಿದ್ದೀಯ ನೋಡು' ಎಂದು ಅವನ ಮುಂದಿದ್ದ ಸಿಪ್ಪೆಯನ್ನು ತೋರಿಸಿ ಹೇಳಿದ. ಸ್ವಲ್ಪ ಬುದ್ಧಿವಂತನಿದ್ದ ಯೋಗೇಶ, 'ನೀನು ನನಗಿಂತ ಜಾಸ್ತಿ ಹಸಿದಿದ್ದೆ, ನಾನು ಸಿಪ್ಪೆಯನ್ನಾದ್ರೂ ಬಿಟ್ಟಿರುವೆ, ನೀನು ಅದನ್ನೂ ಬಿಟ್ಟಿಲ್ಲ' ಎಂದಾಗ ರಮೇಶ ಮಾತಿಲ್ಲದೆ ಕುಳಿತ.

**ಪ.ನಾ ಹಳ್ಳಿ ಹರೀಶ್ ಕುಮಾರ್**